ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 67/2025**

ಪ್ರ.ವ.ಬೋ.ತಾಃ 13-11-2025

ಚಾಸಾಃ 1 ಫ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಸ್ವರ್ಣ ರಮೇಶ್ |
| ತಂದೆ/ಗಂಡನ ಹೆಸರು | ಕೆ.ಪಿ.ರಮೇಶ್ |
| ವಯಸ್ಸು | 50 ವರ್ಷ |
| ವೃತ್ತಿ | ಗೃಹಿಣಿ |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿತರರು ನನಗೆ ಗೊತ್ತು. ದಿಃ30.04.2024 ರಂದು ಬೆಳಗ್ಗೆ 5.45 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಮುಂಭಾಗದಲ್ಲಿ ನೀರನ್ನು ಹಾಕುತ್ತಿದ್ದಾಗ ಆರೋಪಿತರು ದ್ವಿಚಕ್ರ ವಾಹನದಲ್ಲಿ ಬಂದು ಒಬ್ಬ ವ್ಯಕ್ತಿ ನನ್ನ ಬಳಿ ಬಂದು ನನ್ನ ಕತ್ತನ್ನು ಹಿಡಿದುಕೊಂಡು ನನ್ನ ಕುತ್ತಿಗೆಯಲ್ಲಿದ್ದ ಸುಮಾರು 40 ಗ್ರಾಂ ತೂಕದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋದರು. ಆಗ ನಾನು ಕೂಗಿಕೊಂಡೆನು. ಆನಂತರ ಆರೋಪಿತರು ಆ ಸ್ಥಳದಿಂದ ಓಡಿ ಹೋದರು. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ.3 ಮತ್ತು

6 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಆ ಸ್ಥಳದಲ್ಲಿ ಎರಡು ಫೋಟೋಗಳನ್ನು ತೆಗೆದರು. ಆ ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ದಿಃ05.05.2025 ರಂದು ಪೊಲೀಸರು ನನ್ನನ್ನು ಮಧುಗಿರಿಯ ಉಪಬಂಧಿ ಖಾನೆಗೆ ಆರೋಪಿತರನ್ನು ಪತ್ತೆ ಹಚ್ಚುವ ಸಲುವಾಗಿ ನನ್ನನ್ನು ಕರೆದರು. ಅದರಂತೆ ನಾನು ಮಧುಗಿರಿಯ ಉಪಬಂಧಿ ಖಾನೆಗೆ ಹೋಗಿ ಆರೋಪಿತರನ್ನು ಪತ್ತೆ ಹಚ್ಚಿರುತ್ತೇನೆ.

ಈಗ ತೋರುತ್ತಿರುವ ಆರೋಪಿತರ ಗುರುತು ಹಚ್ಚುವಿಕೆಯ ಮೂರು ಕವಾಯತ್ ಗಳಲ್ಲಿರುವ ಸಹಿಗಳು ನನ್ನದಾಗಿರುತ್ತವೆ. ಮೂರು ಕವಾಯತ್‌ಗಳನ್ನು ನಿಪಿ.5 ರಿಂದ ನಿಪಿ.7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.5(ಎ) ರಿಂದ 7(ಎ) ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟ ಒಂದು ದೃಢೀಕರಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ ಅದನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಆನಂತರ ನ್ಯಾಯಾಲಯ ಆದೇಶದಂತೆ ಬಂಗಾರದ ಮಾಂಗಲ್ಯ ಸರವನ್ನು ಪೊಲೀಸ್ ಠಾಣೆಯಲ್ಲಿ ಬಿಡಿಸಿಕೊಂಡಿರುತ್ತೇನೆ. ಈಗ ತೋರುತ್ತಿರುವ ಬಂಗಾರದ ಸರವನ್ನು ಬಿಡುಗಡೆ ಮಾಡುವಾಗ ಮಾಡಲಾದ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆಯಲಾಗಿರುತ್ತದೆ. ಅವುಗಳನ್ನು ನಿಪಿ.10 ಮತ್ತು 11 ಎಂದು

ಗುರುತಿಸಲಾಯಿತು. ಆರೋಪಿತರನ್ನು ವಿಡಿಯೋ ಕಾನ್ಪರೆನ್ಸ್ ಮೂಲಕ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ವಕೀಲರಿಂದಃ–**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂ.200/–ರ ಖರ್ಚಿನ ಸಹಿತ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ